# ಬಿಡುಗಡೆ

ಸಂತೆಬೆನ್ನೂರು ಫೈಜ್ನಟ್ರಾಜ್
ಕಲೆ: ಎಸ್‌.ವಿ. ಹೂಗಾರ್

**ಬೆಂಕಿಯುಂಡೆಯ ಬೆಳಕು ಬೆಣ್ಣೆಯುಂಡೆಯ ಬೆಳಕು**
**ಮಂಕುವಿಡಿಸಲು ಸಾಕು ಮಣ್ಣುಂಡೆ ಕಣ್ಗೆ**
**ಶಂಕೆಗೆಡೆಯಿರದು ಕತ್ತಲೆಯೇ ಜಗವನು ಕವಿಯೆ**
**ಬೊಂಕು ದೀವಿಗೆ ತಂಟೆ – ಮಂಕುತಿಮ್ಮ**

ಮೂಡಲಗಿರಿಯಪ್ಪ ಗೋಡೆ ಕಡೆ ಮುಖ ಮಾಡಿ ಸಾವಿರಾರು ಗೀರುಗಳು ತುಂಬಿದ್ದ ಗೋಡೆಯನ್ನೇ ಬಹಳ ಹೊತ್ತಿನಿಂದ ನೋಡುತ್ತಲೇ ಇದ್ದ.

ಹೊರಗಡೆ ಕತ್ತಲು ತುಂಬಿತ್ತು; ಅವನೊಳಗೂ!

ದೊಡ್ಡ ಹಾಲಿನ ತುಂಬಾ ಜನ ಅವರವರ ಲೋಕದಲ್ಲಿ ತಲ್ಲೀನ. ನಿನ್ನೆ ಸಂಜೆ ಪಿ.ಸಿ. ಕೊಂಡಪ್ಪ ಬಂದು 'ಮೂಡ್ಲಪ್ಪಾ ಹೊಡೆದೆಯಲ್ಲಾ ಚಾನ್ಸು, ಮುಂದ್ಲ ವಾರ ಬಿಡುಗಡೆ ನಿಂಗೆ ನಾಡಿದ್ದು ಕೋರ್ಟ್‌ಲ್ಲಿ ಒಂದು ಹಿಯರಿಂಗ್ ಐತೆ. ಅದಾತಂದ್ರೆ ಕಳಿಸ್ತೀವಿ ನೆಮ್ಮದಿಯಾಗಿ ಬದುಕು' ಅಂತಂದು ಎರಡು ಬಾಳೆಹಣ್ಣು ಕೊಟ್ಟು ಹೋಗಿದ್ದ. ಆ ಕ್ಷಣದಿಂದ ಮೂಡಲಗಿರಿಯಪ್ಪ ಚಿಂತೆಗೆ ಬಿದ್ದಿದ್ದ. ಬಿಡುಗಡೆ ಅನ್ನೋ ಪದ ಅವನ ಕಿವಿಲಿ ಕಾದ ಸೀಸ ಹಾಕಿದಂತೆ ಆಗಿತ್ತು.

ಅಲ್ಲಿದ್ದವರೆಲ್ಲರೂ ವಿಚಾರಣಾಧೀನ ಕೈದಿಗಳು; ಅದು ಶಿವಮೊಗ್ಗ ಕೇಂದ್ರ ಕಾರಾಗೃಹ!

ಮೂಡಲಗಿರಿಯಪ್ಪ ಅಲ್ಲಿಗೆ ಬಂದು ಬಹಳ ದಿನಗಳೇ ಆಗಿದ್ದವು. ಮೂಡಲಗಿರಿಯಪ್ಪ ಸಣ್ಣ ಕಳ್ಳ.

ಶಿವಮೊಗ್ಗದ ಪುರಲೆ ಗ್ರಾಮದಲ್ಲಿ ಪೊರಕೆ ಮಾರೋ ಈತ ಹಳ್ಳಿ ತೋಟಗಳ ಸುತ್ತಿ ತೆಂಗಿನ ಗರಿಗಳನ್ನು ತಂದು, ಕಡ್ಡಿ ಬಿಡಿಸಿ, ಚಾಕುವಿನಲ್ಲಿ ಸವರಿ, ಹಿಡಿ ಕಟ್ಟಿ, ಹೊರೆ ಹೊತ್ತು ಬೀದಿ ಬೀದಿ ಹಳ್ಳಿ ಹಳ್ಳಿಲಿ ಮಾರಿದರೆ ಹತ್ತೋ ಇಪ್ಪತ್ತೋ ಉಳಿಯೋದು. ಅದರಲ್ಲಿ ಅವನು, ಮುದಿ ತಾಯಿ ಹೆಂಗೋ ಗಂಜಿ ಕುಡಿದು ಬದುಕೋರು. ಹಿಂದಿಲ್ಲ ಮುಂದಿಲ್ಲ. ಹಂಗೆ ತೋಟ ಸುತ್ತಿ ತೆಂಗಿನ ಗರಿ ಸಂಗ್ರಹಿಸುವಾಗಲೇ ಬಾಯಾರಿಕೆ ಅಂತ ಎರಡು ಎಳನೀರು ಯಾರದೋ ತೋಟದಲ್ಲಿ ಕುಡಿದಿದ್ದಕ್ಕೆ ಹಿಡಿದು, ಹೊಡೆದು ಸ್ಟೇಷನ್ನಿಗೆ ಹಾಕಿದ್ರು. ಆಮೇಲೆ ಎರಡು ಮೂರ್ ಕಡೆ ಹೆಬ್ಬೆಟ್ಟೊತ್ತಿಸಿ ಬೈದು ಕಳಿಸಿದ್ರು.

ಇದು ಅವನ ಸ್ವಾಭಿಮಾನಕ್ಕೆ ಧಕ್ಕೆ ಬಿದ್ದಂತಾಗಿ ಮೂಡಲಗಿರಿಯಪ್ಪ ಕನಲಿ ಹೋಗಿದ್ದ. 'ಎಲ್ಡು ಎಳನೀರು ಟೇಸನ್ ಮೆಟ್ಲ ಅತ್ತಿಸ್ತಾ ಸಿವನೇ' ಅಂತ ನೊಂದುಕೊಂಡ. ಜೊತೆಗೆ ಪೊರಕೆ ಹೊರೆ ಬಿಸಾಕಿ ಹೊಲ, ತೋಟ ಅಡ್ಡಾಡಿ ಕಾಯಿ, ಎಳನೀರು ಕದಿಯಲಾರಂಭಿಸಿದ. ಒಳ್ಳೆ ಕಾಸು ಕಾಣಲಾರಂಬಿಸಿತು. ಅಜ್ಜಿಗೆ ಅನುಮಾನ ಶುರುವಾಗಿ ಯಾಕೆ ಏನು ಎತ್ತ ಅಂದ್ರೂ ಕೂಡಾ ಉತ್ತರಿಸದೇ ಪಳಗಿದ ಕಳ್ಳ ಆದ.

ಕೊಂಡಪ್ಪನ ಮಾತು ನೆನಪಿಸಿಕೊಂಡು ಮೂಡಲಗಿರಿಯಪ್ಪ ಗೋಡೆ ನೋಡ್ತಾ ಇಡೀ ರೂಮನ್ನೊಮ್ಮೆ ಜಾಲಾಡಿದ. ತನ್ನದೇ ಮನೆ ಬಿಟ್ಟು ಹೋಗಬೇಕೇನೋ ಅನ್ನಿಸಿತು. ಅದೆಷ್ಟು ಸಾರಿ ಬಂದು ಬಂದು ಹೋಗಿದ್ದೇನೆ. ಒಮ್ಮೊಮ್ಮೆ ಪೊಲೀಸರೇ ಬಿಡಿಸಿದ್ದಾರೆ. ಕೆಲವು ಸಾರಿ ಶಿವಮೊಗ್ಗದ ಸಾಹುಕಾರ್ರೇ ಜಾಮೀನು ಕೊಡಿಸಿ ಹೊರತಂದಿದ್ದಾರೆ. ಅವರವರ ಅನುಕೂಲಕ್ಕೆ, ಖರ್ಚಿಗೆ ಹಣ ಇಲ್ಲಾಂದ್ರೆ ಹಿಂಗ್ ಬಿಡಿಸಿ ಕಳ್ಳತನಕ್ಕೆ ಕಳಿಸೋ ಇವರ ಸ್ವಾರ್ಥಕ್ಕೆ ಒಳಗೇ ನಗುತ್ತಿದ್ದ ಮೂಡಲಗಿರಿಯಪ್ಪ. ಕಳ್ಳತನವೆನ್ನುವುದು ನೀರು ಹೊಳ್ಕೋ ದಾರಿಯಾದಂತಾಗಿತ್ತು. ಆದರೆ ಈಗಲೇ ಇಷ್ಟು ದೀರ್ಘ ಕಾಲ ಜೈಲಲ್ಲಿ ವಿಚಾರಣಾಧೀನ ಖೈದಿಯಾಗಿ ಕಾಲ ಕಳೆಯಬೇಕಾಗಿರೋದು.

ಬನ್ನಿಕೋಡು ದೇವಣ್ಣ ಎದುರು ಕೂತು ಅವನನ್ನೇ ನೋಡುತ್ತಿದ್ದ. ನಿನ್ನೆ ಪಿ.ಸಿ. ಕೊಂಡಪ್ಪ ಈ ಬಿಡುಗಡೆಯ ವಿಚಾರ ಹೇಳಿದಾಗಿನಿಂದ ಮೂಡಲಗಿರಿಯಪ್ಪನಲ್ಲಿ ಆಗುತ್ತಿರುವ ಬದಲಾವಣೆಯನ್ನು ದೇವಣ್ಣ ಗಮನಿಸುತ್ತಲೇ ಇದ್ದ. ಇಡೀ ರಾತ್ರಿ ಮಲಗದೇ ಎದ್ದೆದ್ದು ಕೂರುತ್ತಿದ್ದ ಮೂಡಲಗಿರಿಯಪ್ಪನ ಒದ್ದಾಟ ನೋಡಿ ಮೌನವಾಗಿಯೇ ಇದ್ದ. ತನಗೂ ಅವನಿಗೆ ವಯಸ್ಸಿನ ಅಜಗಜಾಂತರ ವ್ಯತ್ಯಾಸ. ಆದರೆ ಜೈಲಲ್ಲಿ ಎಲ್ರೂ ಒಂದೇ. ಬಿಡುಗಡೆ ಅಂದರೆ ಎಂಥೋರಾದ್ರೂ ಖುಷಿಯಿಂದ ಕುಣಿದು ಕುಪ್ಪಳಿಸುವಾಗ ಈ ಅಜ್ಜ ಯಾಕೆ ಮಂಕಾತು?

ಅವನ ಅವ್ವ ನೋಡಿಕೊಳ್ಳೋರಿಲ್ಲದೇ, ಸರಿಯಾಗಿ ಕೂಳು ನೀರು ಇಲ್ಲದೇ ಬೀದಿ ಹೆಣವಾದಳೆಂದು ಎಷ್ಟೋ ದಿನಗಳಾದ ಮೇಲೆ ಮೂಡಲಗಿರಿಯಪ್ಪನಿಗೆ ಹೇಳಿದ್ರಂತ ನನ್ನ ಹತ್ರ ಹೇಳಿ ಅತ್ತಿದ್ದ. ಹೊರಗೆ ಹೋದರೆ ಯಾರಿದ್ದಾರೆ? ಆದರೂ ಜೈಲು ಜೈಲೇ!

ದೇವಣ್ಣ ಮೆಲ್ಲಗೆ ಮೂಡಲಗಿರಿಯಪ್ಪನ ಹತ್ತಿರ ಬಂದು ಕೂತ. ಮಗ್ಗುಲಿಗೆ ಬಂದ ದೇವಣ್ಣನನ್ನು ಕಣ್ತುಂಬ ನೋಡಿದ

